ಪಿಡಬ್ಲ್ಯೂ: 1

**ಸಾಕ್ಷಿಯನ್ನು ಪುನಃ ದಿಃ 25-04-2018 ರಂದು ಕರೆಸಿ ಪ್ರಮಾಣೀಕರಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ಕಿಲುಕೋಟೆಯಿಂದ ಸೂಲಿಬೆಲೆಗೆ ಹೋಗಬೇಕಾದರೆ ಕೋಲಾರ, ಹೆಚ್‌ಕ್ರಾಸ್, ವೇಮಗಲ್ ಮುಖಾಂತರ ಸೂಲಿಬೆಲೆಗೆ ಹೋಗಬೇಕು ಎಂದರೆ ಗೊತ್ತಿಲ್ಲ. ಸೂಲಿಬೆಲೆಗೆ ಕೀಲುಕೋಟೆಯಿಂದ ಹೋಗಬೇಕಾದರೆ ನನ್ನ ಅಳಿಯ ಕೋಲಾರದ ಬಸ್‌ನಿಲ್ದಾಣಕ್ಕೆ ಬರಬೇಕು ಎಂದು ಗೊತ್ತು, ಆದರೆ ಯಾವ ಮಾರ್ಗವಾಗಿ ಹೋಗುತ್ತಾರೆ ಎಂದು ಗೊತ್ತಿಲ್ಲ. ಪ್ರತಿದಿನ ಬೆಳಿಗ್ಗೆ 7.30 ರಿಂದ 7.45 ರ ಒಳಗೆ ನನ್ನ ಅಳಿಯ ಮನೆ ಬಿಡುತ್ತಿದ್ದರು, ಮನೆಯಲ್ಲಿ ತಿಂಡಿ ತಿಂದುಕೊಂಡು ಹೋಗುತ್ತಿದ್ದರು. ಕೆಲವೊಮ್ಮೆ ನಾನು ಬರುವ ಮೊದಲೇ ಕೀಲುಕೋಟೆಯ ಮನೆಗೆ ನನ್ನ ಅಳಿಯ ಬಂದಿರುತ್ತಿದ್ದ. ನನ್ನ ಮಗಳು ಕೀಲುಕೋಟೆಯ ಮನೆಗೆ ಬಂದಾಗಿನಿಂದ ನಾನೂ ನನ್ನ ಅಳಿಯ, ನನ್ನ ಮಗಳು ಮತ್ತು ನನ್ನ ಮೊಮ್ಮಗಳು ಆ ಮನೆಯಲ್ಲಿ ವಾಸ ಇದ್ದೆವು ಎಂದರೆ ಸರಿ.

ನಾನು ಪ್ರತಿ ದಿನ ಬೆಂಗಳೂರಿನ ಡಿಡಿಪಿಐ ಕಚೇರಿಗೆ ಹೋಗಿ ವಾಪಸ್ಸು ಬರುತ್ತಿದ್ದೆ. ಆ ರೀತಿ ನಾನು ಕಚೇರಿಗೆ ಹೋಗುತ್ತಿದ್ದಾಗ ನನ್ನ ಮೊಬೈಲ್ ನನ್ನ ಬಳಿ ಇರುತ್ತಿತ್ತು. ನಾನು ನನ್ನ ಮಗಳ ಮನೆಯನ್ನು ಬೆಳಿಗ್ಗೆ 8.00 ಅಥವಾ 8.10 ಕ್ಕೆ ಕಚೇರಿಗೆ ಹೋಗಲು ಬಿಡುತ್ತಿದ್ದೆ. ನಾನು ಯಾವಾಗಲೂ 9.45 ಕ್ಕೆ ಮತ್ತು ಕೆಲವೊಮ್ಮೆ 9.00 ಗಂಟೆಗೆ ವಾಪಸ್ಸು ಬರುತ್ತಿದ್ದೆ. ನಾನು ಮನೆಗೆ ಬಂದು ಊಟ ಮಾಡಿ ನಂತರ ಎಲ್ಲರೂ ಮಲಗುತ್ತಿದ್ದೆವು ಎಂದರೆ ಸರಿ, ಕೆಲವೊಮ್ಮೆ ಆತ ಗಲಾಟೆ ಮಾಡಿದಾಗ ಊಟ ಇಲ್ಲದೇ ಸಹ ಮಲಗಿದ್ದೆ ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿಲ್ಲ.

ನಾನೂ ಸಹ ತಿಂಡಿ ತಿಂದು ಕೆಲಸಕ್ಕೆ ಹೋಗುತ್ತಿದ್ದೆ. ನನ್ನ ಹೆಂಡತಿ ನನ್ನ ಮಗಳ ಮನೆಯಲ್ಲಿ ನಮ್ಮ ಜೊತೆ ಇದ್ದರು ಎಂದರೆ ಸರಿಯಲ್ಲ, ಕೇವಲ 3 ದಿನ ಮಾತ್ರ ಇದ್ದು, 1ನೇ ಆರೋಪಿ ಗಲಾಟೆ ಮಾಡಿ ನನ್ನ ಹೆಂಡತಿಯನ್ನು ಓಡಿಸಿದ. ದಿ: 27-06-2013 ರಿಂದ 3 ದಿನಗಳ ಕಾಲ ನನ್ನ ಹೆಂಡತಿ ನನ್ನ ಜೊತೆ ನಮ್ಮ ಮನೆಯಲ್ಲಿ ಇದ್ದಳು. ನಾನು ಕೆಲಸಕ್ಕೆ ಹೋದಾಗ ನನ್ನ ಹೆಂಡತಿ ನನ್ನ ಮಗಳ ಜೊತೆ ಇರುತ್ತಿದ್ದಳು. ದಿ: 27-06-2013 ರಂದು ಬೆಳಿಗ್ಗೆ 7.30ಕ್ಕೆ ಹಾಲು ಉಕ್ಕಿಸಿದೆವು. ಅದೇ ದಿನ ಮನೆಗೆ ಬೇಕಾದ ಎಲ್ಲಾ ವಸ್ತುಗಳನ್ನು ತಂದಿದ್ದೆವು. ದಿ: 29-06-2013 ರವರೆಗೆ ನನ್ನ ಹೆಂಡತಿ ನನ್ನ ಜೊತೆ ಮಗಳ ಮನೆಯಲ್ಲಿ ಇದ್ದಳು.

ನಾನು ದಿ: 29-06-2013 ರಂದು ಕಚೇರಿಯಿಂದ ಮನೆಗೆ ಬಂದ ನಂತರ ನನಗೆ ನನ್ನ ಹೆಂಡತಿ ಗಲಾಟೆ ವಿಷಯ ಹೇಳಿ ನಂತರ ಆಕೆಯ ಅಕ್ಕನ ಮನೆಗೆ ಹೋದಳು. ಆಗ ಸಮಯ ಸುಮಾರು 9.15 ರಿಂದ 9.30 ಆಗಿರಬಹುದು. ದಿ: 29-06-2013 ರಂದು ನನ್ನ ಹೆಂಡತಿ ಅವರ ಅಕ್ಕನ ಮನೆಗೆ ಹೋದ ನಂತರ ದಿ: 08-07-2013 ರಂದು ನನಗೆ 1ನೇ ಆರೋಪಿ ಹೊಡೆದಿದ್ದು, ಮಾರನೆಯ ದಿನ ನನ್ನ ಹೆಂಡತಿ ನನ್ನ ಮಗಳ ಮನೆಗೆ ಬಂದಿದ್ದಳು. ನಾನು ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 29-06-2013 ರಂದು ದಿ: 08-07-2013 ರವರೆಗೆ ನಾನು ಕಚೇರಿಗೆ ಹೋಗುತ್ತಿದ್ದುದರಿಂದ ನನ್ನ ಹೆಂಡತಿ ನನ್ನ ಮಗಳ ಮನೆಗೆ ಬರುತ್ತಿದ್ದರೋ ಇಲ್ಲವೋ ಗೊತ್ತಿಲ್ಲ.

ದಿಃ 09-07-2013 ರಂದು ಮಾಮೂಲಿನಂತೆ ಬೆಳಿಗ್ಗೆ 9.00 ಗಂಟೆಗೆ ಕಚೇರಿಗೆ ಹೋಗಿದ್ದೆ. ನಂತರ ಹೇಳುತ್ತಾರೆ, ಆ ದಿನ ನಾನು ನನ್ನ ಹೆಂಡತಿಯನ್ನು ಅವರ ಅಕ್ಕನ ಮನೆಯಲ್ಲಿ ಬೇಟಿಯಾಗಿ ಮಾತನಾಡಿಕೊಂಡು ನಂತರ ಕಚೇರಿಗೆ ಹೋದೆ ಎಂದು. ಈ ವಿಷಯವನ್ನು ನಾನು ದೂರಿನಲ್ಲಿ ಅಥವಾ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನೆನಪಿಲ್ಲ. ದಿಃ 09-07-2013 ರಂದು ನಾನು ಕಚೇರಿಯಿಂದ ನೇರವಾಗಿ ನನ್ನ ಮಗಳ ಮನೆಗೆ ಬರಲಿಲ್ಲ. ದಿಃ 09-07-2013 ರಂದು ಬೆಳಿಗ್ಗೆ 10.45 ರಿಂದ 11.00 ಗಂಟೆಗೆ ಡಿಡಿಪಿಐ ಕಚೇರಿಗೆ ಹೋಗಿದ್ದೆ. ನಾನು ಆ ದಿನ ಶಾಲೆಯ ಮೀಟಿಂಗ್ ಮತ್ತು ಬೇರೆ ಶಾಲೆಗಳಿಗೆ ಬೇಟಿ ನೀಡಿ 5.00 ಗಂಟೆ ವರೆಗೆ ಕಚೇರಿಯಲ್ಲಿದ್ದೆ. ಆ ಅವದಿಯಲ್ಲಿ ಮೊಬೈಲ್ ನನ್ನ ಸ್ವಾದೀನದಲ್ಲಿ ಇತ್ತು. ನಾನು ಅಲ್ಲಿಂದ ಕೋಲಾರನ್ನು 9.00 ಗಂಟೆಗೆ ತಲುಪಿದೆ. ಸಾಕ್ಷಿ ಸ್ವತಃ ಹೇಳುತ್ತಾರೆ ನನ್ನ ಹೆಂಡತಿ ಸಂಜೆ 5.00 ಗಂಟೆಗೆ ಗಲಾಟೆಯ ಬಗ್ಗೆ ಪೋನ್ ಮಾಡಿದ್ದರಿಂದ ನಾನು ಕಚೇರಿಯನ್ನು ಬಿಟ್ಟೆ.

ನನ್ನ ಹೆಂಡತಿ ಆ ದಿನ ಪೋನ್ ಮಾಡದೇ ಇದ್ದಿದ್ದರೆ ನಾನು ಅಷ್ಟು ಬೇಗ ಹೊರಡುತ್ತಿರಲಿಲ್ಲ. ಆ ಸಮಯದಲ್ಲಿ ನನ್ನ ಹೆಂಡತಿ ನನ್ನ ಮಗಳ ಮನೆಯಲ್ಲಿ ಇದ್ದಳು. ಆಕೆ ಮನೆಯ ಒಳಗೆ ಅಥವಾ ಹೊರಗೆ ಇದ್ದಳೋ ಗೊತ್ತಿಲ್ಲ. ನನ್ನ ಹೆಂಡತಿ ತನ್ನ ಮೊಬೈಲ್‌ನಿಂದ ನನ್ನ ಮೊಬೈಲ್‌ಗೆ ಪೋನ್ ಮಾಡಿದ್ದಳು. ಆಗ ನಾನು ನನ್ನ ಹೆಂಡತಿಗೆ ಮಗಳಿಗೆ ಪೋನ್ ಕೊಡುವಂತೆ ಹೇಳಲಿಲ್ಲ. ಆ ರೀತಿ ಕೇಳಲು ನನಗೆ ತೊಂದರೆ ಇರಲಿಲ್ಲ, ಆದರೆ ನಾನು ಅವಸರವಾಗಿ ಬರಬೇಕಾಗಿದ್ದುದರಿಂದ ಕೇಳಲಿಲ್ಲ. ನನ್ನ ಹೆಂಡತಿ ಪೋನ್ ಮಾಡಿದಾಗ ನಾನು ಬಸ್ ಹತ್ತಿರಲಿಲ್ಲ, ನಮ್ಮ ಕಚೇರಿಯಲ್ಲಿ ಇದ್ದೆ. ನಾನು ನನ್ನ ಹೆಂಡತಿಗೆ ನನ್ನ ಮಗಳ ಮನೆಯ ಬಳಿ ಇರುವಂತೆ ಹೇಳಲಿಲ್ಲ, ಆದರೆ ಗಲಾಟೆ ಮಾಡಿಕೊಳ್ಳಬೇಡಿ ಎಂದು ಹೇಳಿದೆ. ನನ್ನ ಹೆಂಡತಿ ಆ ದಿನ ನನಗೆ 5.00 ಗಂಟೆಗೆ ಪೋನ್ ಮಾಡಲಿಲ್ಲ ಮತ್ತು ಈ ಕೇಸಿಗಾಗಿ ಸೃಷ್ಟಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಿಃ 09-07-2013 ರಂದು 9.45 ಕ್ಕೆ ನನ್ನ ಮಗಳ ಮನೆಗೆ ಹೋದೆ. ಕೋಲಾರಕ್ಕೆ 9.00 ಅಥವಾ 9.15 ಕ್ಕೆ ಬಂದಿದ್ದೆ. ನಾನು ಬಸ್ಸು ಇಳಿದವನು ಸೀದ ವೆಂಕಟೇಶಪ್ಪ ರವರ ಮನೆಗೆ ಹೋದೆ. ವೆಂಕಟೇಶಪ್ಪ ರವರ ಮನೆಯಲ್ಲಿ 10-15 ನಿಮಿಷ ಇದ್ದೆ. ನನ್ನ ಮಗಳ ಮನೆಗೆ ಹೋಗುವಾಗ ನನ್ನ ಜೊತೆ ನನ್ನ ಹೆಂಡತಿ ಬರಲಿಲ್ಲ. ನಾನು ನನ್ನ ಹೆಂಡತಿಯನ್ನು ವೆಂಕಟೇಶಪ್ಪ ರವರ ಮನೆಯಲ್ಲಿ ಆ ದಿನ ಬೇಟಿಯಾದೆ. ಆಗ ನಾನು ನನ್ನ ಹೆಂಡತಿಯನ್ನು ನನ್ನ ಮಗಳ ಮನೆಗೆ ವಿಚಾರ ಮಾಡುವ ಸಲುವಾಗಿ ಕರೆದುಕೊಂಡು ಹೋಗಲಿಲ್ಲ. ದಿಃ 09-07-2013 ರಂದು ರಾತ್ರಿ 9.15ಕ್ಕೆ ಬೇಟಿಯಾದ ನಂತರ ದಿಃ10-07-2013 ರಂದು ಬೆಳಿಗ್ಗೆ ನನ್ನ ಮಗಳ ಮನೆಯಲ್ಲಿ ನನ್ನ ಹೆಂಡತಿಯನ್ನು ಬೇಟಿಯಾದೆ.

ದಿಃ 10-07-2013 ರಂದು ಬೆಳಿಗ್ಗೆ ನನ್ನ ಮಗಳ ಮನೆಯಿಂದ ಹೊರಟವನು ನಾನು ನೇರವಾಗಿ ಕಚೇರಿಗೆ ಹೋಗಲಿಲ್ಲ, ಕಾರಣ ನಾನು ದಾರಿಯಲ್ಲಿ ಬರುತ್ತಿದ್ದಾಗ ನನ್ನ ಅಳಿಯ ಇಂಡಿಕಾ ಕಾರಿನಲ್ಲಿ ಬರುತ್ತಿದ್ದು, ನನ್ನನ್ನು ಗುರುಗುಟ್ಟಿಕೊಂಡು ನೋಡಿದ್ದರಿಂದ ನಾನು ವೆಂಕಟೇಶ ರವರ ಮನೆಗೆ ಹೋಗಿ ನನ್ನ ಹೆಂಡತಿ ಮತ್ತು ವೆಂಕಟೇಶ್ ಅವರ ಜೊತೆ ಮಾತನಾಡಿ ನಂತರ ಸುಧಾಕರ್ ರವರ ಮನೆಗೆ ಹೋಗಿ ನಂತರ ಕಚೇರಿಗೆ ಹೋದೆ. ಸುದಾಕರ್ ರವರ ಮನೆಯಲ್ಲಿ 10.45 ರಿಂದ 11.00 ಗಂಟೆಯವರೆಗೆ ಇದ್ದೆ.

" ನಂತರ ನಾನು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ 1ನೇ ಆರೋಪಿ ಇಂಡಿಕಾ ಕಾರಿನಲ್ಲಿ ನನ್ನ ಎದುರುಗಡೆ ಬಂದ, ಆಗ 1ನೇ ಆರೋಪಿ ಏನೋ ಮರೆತಿರಬಹುದು ಎಂದು ಅಂದುಕೊಂಡೆ, ನಂತರ ನಾನು ವೆಂಕಟೇಶ್ ರವರ ಮನೆಗೆ ಹೋಗಿ ಅಲ್ಲಿಂದ ಸುಧಾಕರ ರವರ ಮನೆಗೆ ಹೋದೆ, ಸುಧಾಕರ್ ರವರ ಬಳಿ ನನ್ನನ್ನು ನನ್ನ ಹೆಂಡತಿಯನ್ನು ಹೊಡೆದ ವಿಷಯ ಹೇಳಿದೆ, ನಂತರ ನಾನು ಬೆಳಿಗ್ಗೆ 11.30 ಕ್ಕೆ ಕೆಲಸಕ್ಕೆ ಹೋದೆ " ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ನೆನಪಿಲ್ಲ.

ನಾನು ಆ ದಿನ ಕೋಲಾರನ್ನು 11.30 ರಿಂದ 1145 ರಲ್ಲಿ ಬಿಟ್ಟಿದ್ದೇನೆ. ನಾನು ನನ್ನ ಮಗಳ ಮನೆಯನ್ನು 10-07-2013 ರಂದು ಬೆಳಿಗ್ಗೆ 8.15 ಕ್ಕೆ ಬಿಟ್ಟಾಗ ನನ್ನ ಮಗಳು ಮತ್ತು ಮೊಮ್ಮಗಳು ಇಬ್ಬರೇ ಮನೆಯಲ್ಲಿದ್ದರು. ಪ್ರತಿದಿನ ನಾನು 5.00 ಗಂಟೆಗೆ ಎದ್ದು ಗೀಜರ್‌ನಲ್ಲಿ ನೀರು ಕಾಯಿಸುತ್ತಿದ್ದೆ. ನನ್ನ ಮಗಳು ಮೊದಲು ಸ್ನಾನ ಮಾಡುತ್ತಿದ್ದು, ನಂತರ ನನ್ನ ಅಳಿಯ, ಆ ನಂತರ ನಾನು ಸ್ನಾನ ಮಾಡುತ್ತಿದ್ದೆ. ದಿ: 10-07-2013 ರಂದು ನಾನು ನೀರು ಕಾಯಿಸಲಿಲ್ಲ. ನಾನು 5.00 ಗಂಟೆಗೆ ಆ ದಿನ ಎದ್ದಿದ್ದೆ. ನಾನು 5.00 ರಿಂದ 8.15 ರವರೆಗೆ ಸ್ನಾನ ಮಾಡಿ ತಿಂಡಿ ತಿಂದಿದ್ದು, ಆ ಅವದಿಯಲ್ಲಿ ಮನೆಯಲ್ಲೇ ಇದ್ದೆ. ದಿ: 09-07-2013 ರಂದು ಗಲಾಟೆಯಾದ ವಿಷಯವನ್ನು ನಾನು ನನ್ನ ಮಗನಿಗೆ ಫೋನ್ ಮಾಡಿ ತಿಳಿಸಲಿಲ್ಲ. ದಿ: 09-07-2013 ರಂದು ಆ ರೀತಿಯ ಯಾವುದೇ ಘಟನೆಯಾಗಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ: 10-07-2013 ರಂದು ಮನು ನೀರು ತರುವುದಕ್ಕಾಗಿ ನನಗೇನೂ ಫೋನ್ ಮಾಡಲಿಲ್ಲ, ಆದರೆ ನಾನು ಫೋನ್ ಮಾಡಿದ್ದೆ. ಆ ದಿನ ಮನೆಯಲ್ಲಿ ಒಂದು ನೀರಿನ ಖ್ಯಾನ್ ಇತ್ತೋ ಇಲ್ಲವೋ ನಾನು ಗಮನಿಸಲಿಲ್ಲ. ಯಾವಾಗಲೂ ನಾನೇ ಎರಡೆರಡು ಖ್ಯಾನ್ ನೀರನ್ನು ತರಿಸುತ್ತಿದ್ದೆ. ದಿ: 27-06-2013 ರಿಂದ ದಿ: 10-07-213 ರವರೆಗೆ ನಮ್ಮ ಮಗಳ ಮನೆಯಲ್ಲಿ ಎರಡು ನೀರಿನ ಖ್ಯಾನ್‌ಗಳು ಇತ್ತು, ಆ ಪೈಕಿ ಒಂದು ಖ್ಯಾನ್ ನೀರು ಮುಗಿದ ನಂತರ ನಾನೇ ಮನುಗೆ ಫೋನ್ ಮಾಡಿ ನೀರು ತರಿಸುತ್ತಿದ್ದೆ ಎಂದರೆ ಸರಿ. ಸಾಮಾನ್ಯವಾಗಿ ಕೋಲಾರದಿಂದ ಬೆಂಗಳೂರಿನ ನಮ್ಮ ಕಚೇರಿ ತಲುಪಲು ಒಂದೂವರೆಯಿಂದ ಎರಡು ಗಂಟೆ ಬೇಕು. ಕೋಲಾರದಿಂದ 11.00 ಗಂಟೆಗೆ ಬಿಟ್ಟರೆ ಬೆಂಗಳೂರಿನ ಸಿಟಿ ಮಾರ್ಕೆಟ್‌ನಲ್ಲಿ ಅಷ್ಟೇನೂ ಟ್ರಾಫಿಕ್ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆ ದಿನ ನಮ್ಮ ಕಚೇರಿಗೆ 1.15 ರಿಂದ 1.30 ಗಂಟೆಗೆ ಹೋದೆ. ದಿ: 10-07-2013 ರಂದು ನಾನು ಕಚೇರಿಗೆ ಹೋಗುತ್ತಿದ್ದಾಗ ಮನು ಪೊನ್ ಮಾಡಿ ಬಾಗಿಲು ತೆಗೆಯುತ್ತಿಲ್ಲ ಎಂದು ಹೇಳಿದ್ದು ನನ್ನ ಹೆಂಡತಿ ಮತ್ತು ವೆಂಕಟೇಶ್ ರವರು ಹೋಗಿ ನೋಡಿ ವಿಷಯ ಹೇಳಿದ ನಂತರ ನಾನು 4.30 ಕ್ಕೆ ಕೋಲಾರಕ್ಕೆ ಬಂದೆ.

ನಾನು ಆ ದಿನ 1.15 ಕ್ಕೆ ನಮ್ಮ ಕಚೇರಿಯಲ್ಲಿ ರಿಜಿಸ್ಟರ್‌ನಲ್ಲಿ ಸಹಿ ಮಾಡಿದೆ. ನಾನು ಕಚೇರಿಯಲ್ಲಿ ಇದ್ದಾಗ ಮನು ಫೋನ್ ಮಾಡಿರಲಿಲ್ಲ, ಮೊದಲೇ ಮಾಡಿದ್ದ. 12-45 ಕ್ಕೆ ಮನು ನನಗೆ ಪೋನ್ ಮಾಡಿದ್ದರು, ಆಗ ನಾನು ಕೆಆರ್‌ಪುರಂನಲ್ಲಿದ್ದೆ. 12.45 ಕ್ಕೆ ಮನು ಫೋನ್ ಮಾಡಿ ಬಾಗಿಲು ತೆಗೆಯುತ್ತಿಲ್ಲ ಎಂದು ಹೇಳಿದಾಗ ನನಗೆ ಗಾಬರಿಯಾಯಿತು, ಆಗ ನನ್ನ ಹೆಂಡತಿಗೆ ಫೋನ್ ಮಾಡಿದೆ.

(ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.